ಕಥೆಗಾರ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ನೀಳ್ಗತೆಯನ್ನು ಆಧರಿಸಿದ ಸಿನಿಮಾ. ತೇಜಸ್ವಿಯವರು ತಮ್ಮ ಚಿತ್ರದ ನಾಯಕಿಯರನ್ನು ರೌಡಿಯರೆಂದೇ ಉದ್ಗರಿಸಿದ್ದಾರೆ. ಸುಮನ್ ಕೂಡ ಚಿತ್ರದ ಇಂಗ್ಲಿಷ್ ಉಪಶೀರ್ಷಿಕೆಗಳಲ್ಲಿ 'ರೌಡಿ ವಿಮಿನ್ ಆಫ್ ಕಿರಗೂರು' ಎಂದು ಉಲ್ಲೇಖಿಸಿದ್ದಾರೆ. ಹೀಗೆ ಕಥೆಗಾರ ಹಾಗೂ ನಿರ್ದೇಶಕಿ ಒಕ್ಕೊರಲಿನಿಂದ ತಮ್ಮ ಚಿತ್ರದ ನಾಯಕಿಯರಿಗೆ ರೌಡಿ ಪಟ್ಟ ಕಟ್ಟಿದ್ದರೂ – ಆ ವಿಶೇಷಣವನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕಿಲ್ಲ. ನಮ್ಮ ನಾಯಕನಟರುಗಳನ್ನು 'ಕಿಚ್ಚ', 'ಹುಚ್ಚ', 'ಹುಲಿ', 'ಸಿಂಹ' ಎಂದೆಲ್ಲ ಅಭಿಮಾನಿಗಳು ಪ್ರೀತಿಯಿಂದ ಕರೆಯುವುದನ್ನು, ಆ ಬಿರುದಾವಳಿಗಳನ್ನು ನಾಯಕನಟರು ಕೂಡ ಹೊತ್ತು ಮೆರೆಯುವುದನ್ನು ಹಾಗೂ ಈ ಕೊಂಡಾಟದ ಹಿಂದೆ ಇರುವುದು ಅಭಿಮಾನವೇ ಹೊರತು ಸತ್ಯವಲ್ಲ ಎನ್ನುವುದನ್ನೂ ಎಲ್ಲರೂ ಬಲ್ಲರು. ಹೆತ್ತವರು ತಮ್ಮ ಮಕ್ಕಳನ್ನು 'ರೌಡಿ' ಎಂದು ಕರೆಯುವುದರ ಹಿಂದೆ ಇರುವುದು ಕೂಡ ಕೊಂಡಾಟವೇ. ಈ ಹಿನ್ನೆಲೆಯಲ್ಲಿ ಕಿರಗೂರಿನ ಗಯ್ಯಾಳಿಗಳನ್ನು ರೌಡಿಗಳೆಂದು ಒಪ್ಪಿಕೊಳ್ಳಬಹುದು. ಇಲ್ಲೊಂದು ಸಂಗತಿಯನ್ನು ಗಮನಿಸಬೇಕು: ರೌಡಿಗಳ ಪುಂಡು ಪೋಕರಿತನದ ಹಿನ್ನೆಲೆಯಲ್ಲಿ ಸ್ವಹಿತಾಸಕ್ತಿ ಇದ್ದರೆ, ಕಿರಗೂರಿನ ಹೆಣ್ಣುಮಕ್ಕಳ ಗಯ್ಯಾಳಿತನದಲ್ಲಿ ಇರುವುದು ಸ್ವಾಭಿಮಾನ ಹಾಗೂ ಬದುಕನ್ನು ಕಟ್ಟಿಕೊಳ್ಳುವ ಛಲ.

'ಕಿರಗೂರಿನ ಗಯ್ಯಾಳಿಗಳು' ಚಿತ್ರದ ವಿಶೇಷ ಇರುವುದು, ಇಂಥ ಇನ್ನೊಂದು ಸಿನಿಮಾ ಕನ್ನಡದಲ್ಲಿಲ್ಲ ಎನ್ನುವುದು. ಹಾಗೆಯೇ, ಇಂಥ ಇನ್ನೊಂದು ಕಥೆ ಕನ್ನಡ ಸಾಹಿತ್ಯದಲ್ಲೂ ಇಲ್ಲ. ಈ ಕಥೆ–ಸಿನಿಮಾ ವಿಶೇಷ ಏನು ಎಂದರೆ ಮತ್ತದೇ ಉತ್ತರ – 'ಗಯ್ಯಾಳಿಗಳು'.

ಸಾಮಾನ್ಯವಾಗಿ 'ಗಯ್ಯಾಳಿಗಳು' ಎನ್ನುವ ಪದವನ್ನು ಸಮಾಜ ನಕಾರಾತ್ಮಕವಾಗಿ ಬಳಸುತ್ತದೆ. ಜೋರುಗಂಟಲಿನ ಹುಡುಗಿಯರನ್ನು, ಕೆಲವೊಮ್ಮೆ ಬಿಡುಬೀಸು ವರ್ತನೆಯ ಹುಡುಗಿಯರನ್ನು ಗಯ್ಯಾಳಿಗಳೆಂದು ಕರೆಯಲಾಗುತ್ತದೆ. ಆ ಗಯ್ಯಾಳಿಗಳಿಗೆ ಸಾತ್ವಿಕ ರೂಪ ತಂದುಕೊಡುವುದು (ಪಳಗಿಸುವುದು) ಸಮಾಜಕ್ಕೆ (ಪುರುಷಪ್ರಧಾನ ಸಮಾಜಕ್ಕೆ) ಪ್ರಿಯವಾದ ಕೆಲಸ. ಇದು ಸಿನಿಮಾಮಂದಿಗಂತೂ ಹೆಚ್ಚು ಪ್ರಿಯವಾದ ಕೆಲಸ. ಪುಟ್ಟಣ್ಣ ಕಣಗಾಲರ 'ಶುಭಮಂಗಳ' ಚಿತ್ರದ ಹೇಮಾಳನ್ನು ನೆನಪಿಸಿಕೊಳ್ಳಿ. 'ಈ ಶತಮಾನದ ಮಾದರಿ ಹೆಣ್ಣು' ಎಂದು ಬೀಗುವ, ಅದರಂತೆಯೇ ಬಾಳುವ ನಾಯಕಿ, ಕೊನೆಗೆ 'ನಾಲ್ಕೊಂದ್ಲ ನಾಲ್ಕು' ಎನ್ನುವ ರೂಢಿಗತ ಲೆಕ್ಕವನ್ನು ಒಪ್ಪಿ ತಲೆದೂಗುತ್ತಾಳೆ. ಪುಟ್ಟಣ್ಣನವರದೇ ಮತ್ತೊಂದು ಸಿನಿಮಾ 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದಲ್ಲೂ ರೂಢಿಗತ ಗಣಿತವೇ ಇದೆ. ಇಲ್ಲಿನ ಹೆಣ್ಣು ಪತಂಗ, ಗಂಡು ಬೆಂಕಿ. 'ಕ್ಷಣಿಕದ ಚಪಲಕೆ ಬಲಿಯಾಗುವೆಯಾ / ಶ್ರೀಮತಿ ಎನಿಸಿ ಮತಿ ನೀಗುವೆಯಾ' ಎನ್ನುವ ನೈತಿಕ ಪ್ರಶ್ನೆಯನ್ನು ಸಿನಿಮಾ ನಾಯಕಿಯ ಮುಂದಿಡುತ್ತದೆ. ಕಾಲು ಕಳೆದುಕೊಂಡು ಒಂದು ಬಗೆಯಲ್ಲಿ ವಿರಾಗಿಯಂತಾದ ಗಂಡನನ್ನು ಕಟ್ಟಿಕೊಂಡ ತುಂಬುಯೌವನದ ಹೆಣ್ಣು, ತನ್ನ ಬಯಕೆಗಳನ್ನು ನೀಗಿಕೊಳ್ಳುವ ಮೂಲಕ ತ್ಯಾಗಮಯಿ ಆಗಬೇಕು, ಪಾತಿವ್ರತ್ಯ ಧರ್ಮ ಎತ್ತಿ ಹಿಡಿಯಬೇಕು ಎನ್ನುವುದು ಈ ಸಿನಿಮಾದ ತಾತ್ವಿಕತೆ. ಈ ಸಿನಿಮಾಗಳ ಜೊತೆಗೆ 'ಸಂಪತ್ತಿಗೆ ಸವಾಲ್' ನೆನಪಿಸಿಕೊಳ್ಳಿ. ಚಿತ್ರದ ನಾಯಕ ಭದ್ರ ಸ್ವಾಭಿಮಾನಿ ತರುಣ. ಅವನ ಚೇಷ್ಟೆಗಳೆಲ್ಲ ಸ್ವಾಭಿಮಾನದ ನಡವಳಿಕೆಗಳು. ಆದರೆ, ನಾಯಕಿ ದುರ್ಗಿಯ ನಡವಳಿಕೆ ದುರಭಿಮಾನದ್ದು, ಹಣದ ಮದದ್ದು! ಹಾಗೆನೋಡಿದರೆ ದುರ್ಗಿ ಒಬ್ಬ ಪೆದ್ದು ಹುಡುಗಿ, ಅಷ್ಟೇ. ಎಂ.ಆರ್. ವಿಠಲ್ ನಿರ್ದೇಶನದ 'ಮಿಸ್ ಲೀಲಾವತಿ' (1965) ಚಿತ್ರದ ನಾಯಕಿ, ವಿವಾಹ ವ್ಯವಸ್ಥೆಯನ್ನು ಧಿಕ್ಕರಿಸಿದರೂ, ಕೊನೆಗೆ